304, ಓಂ ಅಪಾರ್ಟಮೆಂಟ್, ಮುಂತಾಗಿ ತನ್ನ ವಿವರಗಳನ್ನು ನೀಡಿಬಿಟ್ಟಿದ್ದಳು. ಒಂದು ಸುಂದರ ದಿನದ ಬೆಳಿಗ್ಗೆ ಅಡುಗೆ ಮಾಡುವ ಗಡಿಬಿಡಿಯಲ್ಲಿದ್ದ ಸರಸ್ವತಿಗೆ 'ಈಗಲೇ ಬರುತ್ತಿದ್ದೇನೆ' ಅಂತ ಆಕಾಶ್ ಮನೋಹರ್‌ನಿಂದ ಫೋನ್ ಬಂದಿತ್ತು. ಅದೇ ಹೊತ್ತಿಗೆ ಶಂಕರ್ ಸ್ನಾನಕ್ಕೆ ಹೋಗಿದ್ದ. 'ಈಗ ಬೇಡ, ನಾನು ಬಿಝಿ, ಹತ್ತು ಗಂಟೆಯ ನಂತರ ಬನ್ನಿ' ಅಂತ ಸರಸ್ವತಿಯೇ ಹೇಳಿ ಫೋನಿಟ್ಟಳು. ಆಗಲೂ ಹೀಗೇ, ಎಂಥದೋ ಭಯ ತಲ್ಲಣ. ಅಪರಿಚಿತರನ್ನು ಈ ಸಿಟಿಯಲ್ಲಿ ನಂಬುವುದು ಹೇಗೆ ಎಂಬ ಚಿಂತೆ. ಅಂದು ಹತ್ತು ಗಂಟೆಯ ನಂತರ ಆಕಾಶ್ ಮನೋಹರ್ ಮೂರ್‍ನಾಲ್ಕು ಬಾರಿ ಫೋನಾಯಿಸಿ, ಮತ್ತೆ ಮತ್ತೆ ವಿಳಾಸ ಕೇಳಿ ಅಂತೂ ಅಪಾರ್ಟ್‌ಮೆಂಟ್ ಮೆಟ್ಟಿಲುಗಳ ಹತ್ತಿ ಬಂದಿದ್ದ.

ಅವನನ್ನು ಕಂಡ ಕೂಡಲೇ ಸರಸ್ವತಿಯ ಸೌಂದರ್ಯ ಪ್ರಜ್ಞೆಯ ಭ್ರಮೆ ಕಳಚಿಬಿದ್ದಿತ್ತು. ಫೇಸ್‌ಬುಕ್ ಪ್ರೊಫೈಲ್‌ನಲ್ಲಿದ್ದ ಫೋಟೊಕ್ಕಿಂತ ಆತ ಎರಡುಪಟ್ಟು ವಯಸ್ಸಾದಂತೆ, ಸಂಸಾರ ಸಾಗರದಲ್ಲಿ ಜರ್ಜರಿತಗೊಂಡ ಒಬ್ಬ ಹಳೆಯ ಗ್ರಹಸ್ಥನಂತಿದ್ದ. ಆಕಾಶ ಮನೋಹರ್ ಸೋಫಾದಲ್ಲಿ ಕೂತು ಅರ್ಧ ಗಂಟೆ ಫೇಸ್‌ಬುಕ್ಕಿನ ಇವಳ ಚಟುವಟಿಕೆಯ ಕುರಿತು 'ಅದೂ ಇಷ್ಟ ಇದೂ ಇಷ್ಟ' ಅಂತ ಪೂಸಿ ಹೊಡೆದು, ನಂತರ ತನ್ನ ನಿಜ ನಾಮಧೇಯ ಅಡಿವೆಪ್ಪ ಅಂತಲೂ, ಸುಮ್ಮನೇ ಆಕರ್ಷಣೆಗಾಗಿ ಇರಲಿ ಅಂತ ಆಕಾಶ್ ಮನೋಹರ್ ಅಂತ ಇರಿಸಿಕೊಂಡಿರುವದಾಗಿಯೂ ಹೇಳುತ್ತ, ದೋಸೆ ಚಾ ತಿಂಡಿಯನ್ನು ಬೇಡ ಬೇಡವೆನ್ನುತ್ತಲೇ ತಿಂದು ಮುಗಿಸಿದ. ನಂತರದಲ್ಲಿ ನಿಧಾನಕ್ಕೆ, ಯಾವುದೋ ಹೆಸರೇ ಕೇಳಿಲ್ಲದ ಸನ್‌ರೈಸ್ ಇನ್ಶೂರನ್ಸ್ ಕುರಿತು ವಿವರ ಹೇಳಿ, ತಾನು ಅದರ ಏಜೆಂಟನೆಂದೂ, 'ಮ್ಯಾಡಂ , ನಿಮ್ ಅಭಿಮಾನಿ ಅದೀನ್ ನಾನು, ನೀವ್ ಒಂದ್ ಪಾಲಿಸಿ ಮಾಡಿದ್ರ ನನಗ ಮಹಾ ಉಪಕಾರ ಮಾಡಿದಂಗ್ ಆಕ್ಕೇತಿ, ಹೀಂಗ್ ಮನೀ ಬಾಗ್ಲಕ್ ಬಂದಿದ್ ನೆಪಕ್ಕರ ಒಂದ್ ಪಾಲಿಸಿ ಮಾಡಸರ್‍ರೀ' ಅನ್ನುತ್ತ 'ವರ್ಷಕ್ ಬರೇ ಆರೂವರಿ ಸಾವ್ರ ತುಂಬಿದ್ರ ಮುಗೀತ್ರಿ, ನಿಮಗ ಏಳೂವರೀ ಸಾವ್ರ ಲಾಭ ಬರತೇತಿ, ನೀವ್ ಒಮ್ಮಿಗೇ ನಲವತ್ತು ಸಾವಿರದಷ್ಟು ದೊಡ್ ಮೊತ್ತ ಪಡೆದು, ಚಿನ್ನಗಿನ್ನ ತೊಗೋಳಾಕ ಬರತೇತಿ' ಎಂದೆಲ್ಲ ಆರಂಭಿಸಿದ್ದೇ ಸರಸ್ವತಿಗೆ ಒಮ್ಮೆಲೇ ತಲೆ ತಿರುಗಿ ಬಂದಂತಾಗಿ, ಮಾತೇ ಮರೆತು ಕಲ್ಲಿನಂತೆ ಕೂತುಬಿಟ್ಟಿದ್ದಳು. ಅಭಿಮಾನಿ ಎಂದು ಹೇಳಿಕೊಂಡು ಬಂದ ಆ ವ್ಯಕ್ತಿಯ ವ್ಯವಹಾರದ ವರಸೆಯೇ ಅವಳಲ್ಲಿ ರೋಷ ಉಕ್ಕಿಸುತ್ತಿತ್ತು.

ಪುನಃ ಶುರು ಮಾಡಿದ ಆತ 'ನೋಡಿ ಮ್ಯಾಡಂ, ನಿಮ್ಮಂಥಾ ಭಾಳ ಹೆಣಮಕ್ಕಳು ಪಾಲಿಸಿ ಮಾಡ್ಯಾರ. ನಿಮ್ ಮನೀಯವ್ರಿಗೆ ತಿಳೀದಂಗೂ ಬೇಕಾರ ನಾ ಗೌಪ್ಯ ಕಾಪಾಡಿಕೊಳ್ತೀನಿ, ನನ್ ಸಿಸ್ಟರ್ ಥರಾ ಅದೀರಿ ನೀವ್ ದೇವತೆ ತರಹ ಅದೀರಿ' ಅಂತೆಲ್ಲ ಬೆಣ್ಣೆ ಹಚ್ಚುತ್ತ ಗೋಗರೆಯುತ್ತ ಎದ್ದು ಹೋಗಲು ತಯಾರಿಲ್ಲದೇ ಕೂತು ಬಿಟ್ಟಿದ್ದ. ಆ ಅವನ ಅತಿರೇಕ ಸಹಿಸಿಕೊಳ್ಳಲಾಗದೇ ಸರಸ್ವತಿ 'ಇಲ್ಲಪ್ಪ, ಹಾಗೆಲ್ಲ ನಮ್ಮ ಕೈಯಾಗ ಅಷ್ಟೊಂದು ದುಡ್ಡು ಒಮ್ಮೆಲೇ ಬರಂಗಿಲ್ಲ, ಸುಮ್ನ ಏನೇನರ ಹೇಳಬ್ಯಾಡ್ರಿ' ಅಂತ ಇನ್ನೇನು 'ಜಾಗಾ ಖಾಲಿ ಮಾಡಿ' ಅಂತ ಹೇಳಬೇಕೂ ಅನ್ನುವುದರೊಳಗೆ ಆತ ಕೈಯಲ್ಲಿರುವ ಪ್ಲಾಸ್ಟಿಕ್ ಕವರ್‌ನಿಂದ ಒಂದು ಬೆಡ್ ಶೀಟನ್ನು ಹೊರತೆಗೆದು 'ಪಾಲಿಸಿ ಮಾಡದಿದ್ರ, ಹೋಗ್ಲಿ ಬಿಡ್ರಿ ಮ್ಯಾಡಂ, ನಿಮಗೇ ಅಂತ ಈ ಚಂದದ ಬೆಡ್ ಶೀಟ್ ತಂದೇನಿ, ಇದರ ನೋಡ್ರಲಾ?' ಅನ್ನುತ್ತ ಸೋಫಾ ಬಿಟ್ಟು ಎದ್ದು ನಿಂತು ಬೆಡ್ ಶೀಟನ್ನು ಬಿಚ್ಚಿ ಹಿಡಿದ. ನಂತರ ಅದನ್ನು ಮಡಚಿ ಸರಸ್ವತಿಯ ಕೈಯಲ್ಲಿ ಒತ್ತಾಯದಿಂದ ಹಿಡಿಸುತ್ತ 'ಮಾರ್ಕೆಟ್‌ನಾಗ್ ಇದ್ರ, ಬೆಲೀ ಕೇಳ್ ನೋಡ್ರಿ, ಮುಟ್ಟರ ನೋಡ್ರಿ ಒಮ್ಮೆ, ಎಷ್ಟ್